ಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಬೆಳಗಾವಿ ಜಿಲ್ಲೆ
ಬೆಳಗಾವಿ

ಮಾನ್ಯರೇ,

**ವಿಷಯ: ನೆರೆಯಿಂದ ಮಕ್ಕಳಿಗೆ ಮತ್ತು ಸಮುದಾಯದವರಿಗೆ ಆದ ಸಮಸ್ಯೆಗಳ ಪರಿಹಾರಕ್ಕಾಗಿ ಹಕ್ಕೊತ್ತಾಯಗಳು**

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್, ನಾಲ್ಕು ದಶಕಗಳಿಂದ ದೇಶದಲ್ಲಿ ಮಕ್ಕಳ ಹಕ್ಕುಗಳ ವಿಷಯದಲ್ಲಿ ಮುಂಚೂಣಿಯಲ್ಲಿರುವ ಹಾಗೂ ಮೂರುಬಾರಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಕೆಲಸಕ್ಕಾಗಿ ನೋಬೆಲ್ ಶಾಂತಿ ಪುರಸ್ಕಾರಕ್ಕೆ ನಾಮನಿರ್ದೇಶನಗೊಂಡಿರುವ ಸಂಸ್ಥೆಯ ಪ್ರತಿನಿಧಿಗಳಾದ ನಾವು ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಕೂಲಿಕಾರ್ಮಿಕರ ಹಾಗೂ ಸಮುದಾಯದವರ ಹಕ್ಕಿಗಾಗಿ ಕೆಲಸ ಮಾಡುತ್ತಿರುವ 'ಜಾಗೃತ ಮಹಿಳಾ ಒಕ್ಕೂಟದ ಸದಸ್ಯರು ಹಾಗೂ 'ಗ್ರಾಮೀಣ ಕೂಲಿಕಾರ್ಮಿಕರ ಸಂಘಟನೆ' ಯ ಕಾರ್ಯಕರ್ತರು ಸೇರಿ ಬೆಳಗಾವಿ ಜಿಲ್ಲೆಯಲ್ಲಿ ನೆರೆಯಿಂದ ತೀವ್ರವಾದ ಸಂಕಷ್ಟಕ್ಕೆ ಒಳಗಾಗಿರುವ 2 ತಾಲೂಕುಗಳನ್ನು ಭೇಟಿ ಮಾಡಿ ನಾವೇ ಸ್ವತಃ ಕಂಡುಕೊಂಡ ನೈಜ ಚಿತ್ರಣವನ್ನು ತಮ್ಮ ತುರ್ತು ಪ್ರತಿಕ್ರಿಯೆಗಾಗಿ ಇಲ್ಲಿ ಹಂಚಿಕೊಳ್ಳುತ್ತಿದ್ದೇವೆ.

ಖಾನಾಪೂರ ತಾಲೂಕಿನ ಮಾಸ್ಕೇನಹಟ್ಟಿ ಹಾಗೂ ಮಂಗೇನಕೊಪ್ಪ, ಹುಕ್ಕೇರಿ ತಾಲೂಕಿನ ಪಾಶ್ಚಾಪುರ ಹಾಗೂ ಮಣಗುತ್ತಿ ಗ್ರಾಮ ಪಂಚಾಯತ್‌ಗಳ ಮಕ್ಕಳು ಹಾಗೂ ಸಮುದಾಯದವರು, ಅದರಲ್ಲೂ ಹಿರಿಯ ನಾಗರಿಕರು ಈ ಕೆಳಗಿನ ಹಕ್ಕೊತ್ತಾಯಗಳನ್ನು ಮಾಡಿ ತಮ್ಮ ಅತ್ಯಂತ ಶೀಘ್ರ ಪ್ರತಿಕ್ರಿಯೆಗಾಗಿ ಎದುರು ನೋಡುತ್ತಿದ್ದಾರೆ.

ನೆರೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಾವು 4 ಮುಖ್ಯ ವಿಷಯಗಳಡಿಯಲ್ಲಿ ಹಂಚಿಕೊಂಡು ಆ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯವಿರುವ ಮುಂದಿನ ಹಜ್ಜೆಗಳು ಹಾಗೂ ಅವುಗಳನ್ನು ನೆರವೇರಿಸಲು ಪೂರಕವಾಗಿರುವ ಕಾನೂನು ಹಾಗೂ ನೀತಿಗಳನ್ನು ಈ ಕೆಳಗೆ ಚಿತ್ರಿಸಿದ್ದೇವೆ. ಜೊತೆಗೆ ಮಕ್ಕಳ ಹಕ್ಕುಗಳ ಸತತ ಉಲ್ಲಂಘನೆಗಳನ್ನೂ ತಮ್ಮ ಗಮನಕ್ಕೆ ತರುತ್ತಿದ್ದೇವೆ.

- **ಈ ಕೆಳಗಿನ ಎಲ್ಲಾ ವಿಷಯಗಳನ್ನು ಒಳಗೊಂಡಂತಹ ವಿಕೋಪ ನಿರ್ವಹಣಾ ಕಾರ್ಯತಂತ್ರ ಹಾಗೂ ಕ್ರಿಯಾ ಯೋಜನೆಯನ್ನು ಅತ್ಯಂತ ಶೀಘ್ರವಾಗಿ ರೂಪಿಸಿ, ನೆರೆಯಿಂದ ಸಂಕಷ್ಟಕೊಳಗಾದ ಜಿಲ್ಲೆಯ ಎಲ್ಲಾ ಮಕ್ಕಳು ಹಾಗೂ ಕುಟುಂಬಗಳ ಅಗತ್ಯಗಳಿಗೆ ಸ್ಪಂಧಿಸಿ ಸಮಗ್ರವಾಗಿ ಜಾರಿಗೆ ತರಲೇಬೇಕು. ಅವುಗಳ ಅನುಷ್ಟಾನದ ಜವಾಬ್ದಾರಿಯನ್ನು ಸಂಬಂಧಿಸಿದ ಸ್ಥಳೀಯ ಸರ್ಕಾರಗಳು ಹಾಗೂ ಅವರಿಗೆ ಪೂರಕವಾಗಿರುವ ಅಧಿಕಾರಿಗಳದ್ದಾಗಿರಬೇಕು. ಇದರ ಜಿಲ್ಲಾ ಮಟ್ಟದ ಮೇಲ್ವಿಚಾರಣೆಯನ್ನು ತಾವು ಪರಿಶೀಲಿಸಬೇಕು. ಈಗ ಲಭ್ಯವಿರುವ ಇರುವ ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರವು 2016ರದ್ದಾಗಿದ್ದು ಅದನ್ನು ತುರ್ತಾಗಿ ನವೀಕರಿಸಬೇಕು.**

| **ನೆರೆಗೆ ಸಂಬಂಧಿಸಿದಂತೆ** | | | | |
|---|---|---|---|---|
| **ಸಮಸ್ಯೆ** | **ಸಮಸ್ಯೆಯ ವಿವರ** | **ಯಾರ ಮೇಲೆ ಪರಿಣಾಮ ಬೀರಿದೆ** | **ಪರಿಹಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳು** | **ಪೂರಕವಾದ ಕಾನೂನು ಮತ್ತು ನೀತಿಗಳು** |
| 1. ಮನೆ | • ನಾವು ಭೇಟಿಯಾದ ಮೂರೂ ತಾಲೂಕಿನಲ್ಲಿ ಅನೇಕ ಕುಟುಂಬಗಳ | • ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು, | • ಮನೆ ಹಾನಿಗೆ ಸಂಬಧಿಸಿದ ಸಮೀಕ್ಷೆಯು ಸ್ಥಳೀಯ | • ರಾಷ್ಟ್ರ ವಿಕೋಪ ನಿರ್ವಹಣಾ ಕಾಯ್ದೆ |

| | | | | |
|---|---|---|---|---|
| | ಮನೆಗಳು ತೀವ್ರ ಹಾನಿ ಅನುಭವಿಸಿವೆ. ಅದರಲ್ಲೂ ವಿಶೇಷವಾಗಿ ಪಾಶ್ಚಾಪುರದಲ್ಲಿ 280ಕ್ಕೂ ಹೆಚ್ಚು ಮನೆಗಳು ಸಂಪೂರ್ಣವಾಗಿ ಬಿದ್ದುಹೋಗಿದೆ.<br>• ಮನೆಗೆ ಆಗಿರುವ ಹಾನಿಯ ಕುರಿತಾದ ಸಮೀಕ್ಷೆ ಸಮರ್ಪಕವಾಗಿ ಆಗಿಲ್ಲ ಮತ್ತು ಕೆಲವು ಕಡೆ ಆಗಿಯೇ ಇಲ್ಲ<br>• ಮನೆಗೆ ಆಗಿರುವ ಹಾನಿಯ ಕುರಿತಂತೆ ಈಗಾಗಲೇ ಮಾಡಿರುವ ವರ್ಗೀಕರಣದಲ್ಲಿ ಅನೇಕ ಸಮಸ್ಯೆಗಳಿವೆ ಮತ್ತು ಅವುಗಳ ವರ್ಗಿಕರಣ ಸ್ಪಷ್ಟವಾಗಿಲ್ಲ. ಕೆಲವು ಕಡೆ ಅತಿಯಾದ ಹಾನಿಯುಂಟಾದ ಮನೆಗಳಿಗೆ “ಸಿ” ಎಂದು, ಅಥವಾ ಕಡಿಮೆ ಹಾನಿಯಾದ ಮನೆಗಳನ್ನು “ಎ” ವರ್ಗೀಕರಣದಲ್ಲಿ ನಮೂದಿಸಲಾಗಿದೆ.<br>• ಹೆಚ್ಚಿನ ಜನರಿಗೆ ತಮ್ಮ ಮನೆಯನ್ನು ಯಾವ ವರ್ಗಕ್ಕೆ ಹಾಕಿದ್ದಾರೆ ಮತ್ತು ಯಾವ ಮಾನದಂಡದಲ್ಲಿ ಹಾಕಿದ್ದಾರೆ, ನಮಗೆ ಎಷ್ಟು ಹಣ ಮಂಜೂರಾಗಬೇಕಿದೆ ಈ ಯಾವುದೇ ಮಾಹಿತಿಗೆ ಸಂಬಂಧಿಸಿದ ಆದೇಶ ಸಿಕ್ಕಿಲ್ಲ.<br>• ಕೆಲವು “ಎ” ವರ್ಗದಲ್ಲಿರುವ ಕುಟುಂಬದವರಿಗೆ ಮೊದಲನೆಯ ಕಂತಿನ ಒಂದು ಲಕ್ಷ ರೂಪಾಯಿ ಖಾತೆಗೆ ಜಮಾ ಆಗಿದೆ ಆದರೆ ಅನೇಕರಿಗೆ ಆಗಿಲ್ಲ.<br>• ಈಗ ಹಾನಿಯ ಅಂಶ ಕಂಡುಬಾರದೇ | ಅಂಗವಿಕಲತೆಯಿರುವವರು, ದುರ್ಬಲ ವರ್ಗದವರು, ಕೃಷಿಕರು, ಕೂಲಿಕಾರ್ಮಿಕರು | ಮಕ್ಕಳು, ಮಹಿಳೆಯರ ಮುಂದಾಳತ್ವದಲ್ಲಿ ನಡೆಯಬೇಕು. ಹಾಗಾದಲ್ಲಿ ಮಾತ್ರ ಪರಿಸ್ಥಿತಿಯ ನೈಜ ಚಿತ್ರಣ ಸಿಗುತ್ತದೆ.<br>• ಈಗ ಹಾನಿಯಾಗದಿದ್ದರೂ ಶಿಥಿಲವಾಗಿರುವ ಮನೆಗಳನ್ನು ಈ ವರ್ಗೀಕರಣದಲ್ಲಿ ಸೇರಿಸಬೇಕು.<br>• ಹಾನಿಯ ವರ್ಗೀಕರಣ ಯಾವ ಮಾನದಂಡದಲ್ಲಿ ಆಗಿದೆ ಎನ್ನುವ ಸ್ಪಷ್ಟೀಕರಣ ಈ ಮೇಲಿನ ತಂಡಕ್ಕೆ ಸ್ಪಷ್ಟವಾಗಬೇಕು.<br>• ಮನೆ ಹಾನಿಯಾಗಿರುವ ಕುಟುಂಬಕ್ಕೂ ಕೂಡ ತಮ್ಮ ಮನೆ ಯಾವ ವರ್ಗಕ್ಕೆ ಸೇರ್ಪಡೆಯಾಗಿದೆ ಮತ್ತು ಏಕೆ ಹಾಗೂ ಅವರಿಗೆ ಸಿಗಬೇಕಾದ ಪರಿಹಾರ ಧನದ ಮೊತ್ತದ ಆದೇಶ ಸಿಗಲೇಬೇಕು.<br>• ಕೆಲವು “ಎ” ವರ್ಗದಲ್ಲಿರುವ ಕುಟುಂಬದವರಿಗೆ ಮೊದಲನೆಯ ಕಂತಿನ ಒಂದು ಲಕ್ಷ ರೂಪಾಯಿ ಖಾತೆಗೆ ಜಮಾ ಆಗಿದೆ. ಕೆಲವರಿಗೆ ಸಿಕ್ಕಿಲ್ಲ. ಪರಿಹಾರ | • ರಾಜ್ಯ ವಿಕೋಪ ನಿರ್ವಹಣಾ ಯೋಜನೆ<br>• ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರ 2016<br>• ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ<br>• ಮಕ್ಕಳ ಹಕ್ಕುಗಳ ಒಡಂಬಡಿಕೆ<br>• ರಾಷ್ಟ್ರೀಯ ಮಕ್ಕಳ ನೀತಿ<br>• ರಾಜ್ಯ ಮಕ್ಕಳ ರಕ್ಷಣಾ ನೀತಿ<br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 |

| | | | | |
|---|---|---|---|---|
| | ಇದ್ದರೂ, ಮನೆಗಳು ನೀರಿನಲ್ಲಿ ಮುಳುಗಿದ್ದರಿಂದ ಶಿಥಿಲವಾಗಿ ಇನ್ನೊಂದು ಮಳೆಗೆ ಬೀಳುವ ಮನೆಗಳನ್ನು ಯಾವುದೇ ವರ್ಗದಲ್ಲಿ ಗುರುತಿಸಿಲ್ಲ. ಒಂದೊಮ್ಮೆ ಮಳೆ ಮರುಕಳಿಸಿದಲ್ಲಿ ಅದರಿಂದ ಜೀವಹಾನಿ ಹಾಗೂ ಆಸ್ತಿಗಳ ಹಾನಿ ಖಚಿತ.<br>• ಮನೆ ಹಾನಿಯಾಗಿರುವ ಅನೇಕರಿಗೆ ತಮ್ಮ ಸ್ಥಳದ ದಾಖಲಾತಿಗಳು ಸರಿಯಾಗಿ ಇಲ್ಲದೇ ಇರುವುದರಿಂದ ಅವರಿಗೆ ಯಾವುದೇ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ ಮತ್ತು ಅವರಿಗೆ ಯಾವುದೇ ಕಾನೂನಾತ್ಮಕ ಸಲಹೆ ಅಥವಾ ಮಾರ್ಗದರ್ಶನ ಸಿಗುತ್ತಿಲ್ಲ.<br>• ಮನೆ ಕಳೆದುಕೊಂಡವರಲ್ಲಿ ಅನೇಕ ಹಿರಿಯ ನಾಗರಿಕರಿದ್ದಾರೆ. ಅವರಿಗೆ ಪ್ರತಿ ಹೆಜ್ಜೆಗೂ ಸಹಾಯ, ಬೆಂಬಲದ ಅತ್ಯಗತ್ಯವಿದ್ದು ಅವರಿಗೆ ಅದನ್ನು ಯಾರೂ ಒದಗಿಸುತ್ತಿಲ್ಲ.<br>• ರಾತ್ರೋರಾತ್ರಿ ಮನೆಕಳೆದುಕೊಂಡ ಮಕ್ಕಳು ಮಾನಸಿಕವಾಗಿ ಹೊಡೆತ ಅನುಭವಿಸಿದ್ದಾರೆ. ಅವರಿಗೆ ಸಕಾಲಿಕ ಸಾಂತ್ವನ, ಸಹಾಯ ದೊರಕಿಲ್ಲ.<br>• ನರೇಗಾ ಕಾರ್ಯಕ್ರಮದಡಿಯಲ್ಲಿ “ಎ” ವರ್ಗೀಕರಣದಲ್ಲಿರುವ ಮನೆಗಳ ನಿರ್ಮಾಣಕ್ಕೆ ಅವಕಾಶವಿದೆ ಆದರೆ “ಬಿ” ಮತ್ತು “ಸಿ” ವರ್ಗೀಕರಣಕ್ಕೆ ಇಲ್ಲ. | | ಧನ ಸಿಗದವರಿಗೆ ಶೀಘ್ರವಾಗಿ ಅದುಮಂಜೂರಾಗಬೇಕು.<br>• ಪರಿಹಾರಧನವನ್ನು ಪಡೆಯಲು ಕಾನೂನಿನ ತೊಡಕು ಇರುವವರಿಗೆ ಅಗತ್ಯವಿರುವ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಬೇಕು.<br>• ಹಿರಿಯ ನಾಗರಿಕರಿಗೆ ವಿಶೇಷವಾಗಿ ಸಹಕಾರ, ಜನಸಹಾಯ ಹಾಗೂ ಬೆಂಬಲ ಸಿಗಬೇಕು.<br>• ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ಸ್ಥಳೀಯ ಸರ್ಕಾರಗಳಿಂದ ವರದಿಯನ್ನು ಪಡೆದುಕೊಂಡು ಪರಿಹಾರ ಕಾರ್ಯವನ್ನು ಖಾತ್ರಿಪಡಿಸಿಕೊಳ್ಳಬೇಕು.<br>• ಮಕ್ಕಳೊಂದಿಗೆ ಸಂವಾದ ನಡೆಸಿ, ವಿಶೇಷ ಗಮನಹರಿಸಿ ಅವರಿಗೆ ಅಗತ್ಯವಿರುವ ಎಲ್ಲಾ ರೀತಿಯ ಸಾಂತ್ವನ ಮತ್ತು ಬೆಂಬಲ ನೀಡಬೇಕು.<br>• ನರೇಗಾ ಕಾರ್ಯಕ್ರಮದಡಿಯಲ್ಲಿ “ಎ”, “ಬಿ” ಮತ್ತು “ಸಿ” | |

| | | | | |
|---|---|---|---|---|
| | | | ವರ್ಗೀಕರಣದಲ್ಲಿರುವ ಮನೆಗಳಿಗೂ ಸಿಗಬೇಕು. | |
| 2. ಭೂಮಿ | • ಮೂರು ತಾಲೂಕುಗಳಲ್ಲಿ ಅತ್ಯಂತ ವ್ಯಾಪಕವಾಗಿ ಕಬ್ಬು (ಹುಕ್ಕೇರಿ) ಭತ್ತ (ಖಾನಾಪೂರ) ನಾಶಹೊಂದಿವೆ.<br>• ಭೂಮಿ ಮತ್ತು ಬೆಳೆಯ ನಾಶದ ಕುರಿತಾಗಿ ಸಮೀಕ್ಷೆ ನಡೆದಿಲ್ಲ, ಅದಕ್ಕೆ ದೊರಕಬೇಕಾದ ಪರಿಹಾರದ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿಯಿಲ್ಲ.<br>• ಕೃಷಿ ಭೂಮಿಗೆ ನೆರೆಯಿಂದಾಗಿ ಕುರುಚಲು ಗಿಡಗಳು, ಕಲ್ಲುಬಂಡೆಗಳು ಹಾಗೂ ಮಣ್ಣು ತುಂಬಿ ಕೃಷಿ ಭೂಮಿ ಹಾಳಾಗಿದೆ.<br>• ಕೃಷಿ ಉತ್ಪನ್ನಗಳ ಹಾನಿಯನ್ನು ಯಾವ ಮಾನದಂಡದ ಮೇಲೆ ಗುರುತಿಸಿ ಪರಿಹಾರ ನಿಗಧಿ ಮಾಡುತ್ತಾರೆ ಎನ್ನುವ ಬಗ್ಗೆ ಮಾಹಿತಿಯಿಲ್ಲ. | • ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳು ಹಾಗೂ ಅವರ ಮನೆಯ ಮಕ್ಕಳು, ಮಹಿಳೆಯರು ಮತ್ತು ಹಿರಿಯ ನಾಗರಿಕರು. | • ಭೂಮಿ ಹಾನಿ ಮತ್ತು ಬೆಳೆಹಾನಿಯನ್ನು ಹಾನಿಯೆಂದು ಪರಿಗಣಿಸಬೇಕು.<br>• ಭೂಮಿ ಹಾನಿ ಮತ್ತು ಬೆಳೆಹಾನಿಯನ್ನು ಸಮೀಕ್ಷೆಯ ಮೂಲಕ ಅತ್ಯಂತ ತ್ವರಿತಗತಿಯಲ್ಲಿ ಗುರುತಿಸಿ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ಪರಿಹಾರಧನ ಹಾಗೂ ವ್ಯವಸ್ಥೆಗಳನ್ನು ಮಾಡಬೇಕು.<br>• ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ ಬೆಳೆ ವಿಮೆಯನ್ನು ಅಳವಡಿಸಬೇಕು. | • ರಾಷ್ಟ್ರ ವಿಕೋಪ ನಿರ್ವಹಣಾ ಕಾಯ್ದೆ<br>• ರಾಜ್ಯ ವಿಕೋಪ ನಿರ್ವಹಣಾ ಯೋಜನೆ<br>• ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರ 2016<br>• ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ<br>• ಮಕ್ಕಳ ಹಕ್ಕುಗಳ ಒಡಂಬಡಿಕೆ<br>• ರಾಷ್ಟ್ರ ಮಕ್ಕಳ ನೀತಿ<br>• ರಾಜ್ಯ ಮಕ್ಕಳ ರಕ್ಷಣಾ ನೀತಿ<br>• ಆಹಾರ ಭದ್ರತಾ ಕಾಯ್ದೆ<br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993<br>• ಎನ್.ಕೆ. ಪಾಟೀಲರ ಅಪೌಷ್ಠಿಕತೆ ನಿವಾರಣೆಗೆ ಸೂಚಿಸಿರುವ ಕಾರ್ಯತಂತ್ರ 2012 |
| 3. ಸೇವೆಗಳು | • ಶಾಲೆಯ ಕಟ್ಟಡ ಶಿಥಿಲಗೊಂಡಿವೆ ಉದಾಹರಣೆ ಹುಕ್ಕೇರಿ ತಾಲೂಕಿನ ಪಾಶ್ಚಾಪುರ ಮತ್ತು ಚಿಕ್ಕೋಡಿಯ ಮಣಗುತ್ತಿ. ಇಲ್ಲಿನ ಶಾಲಾ ಕೊಠಡಿಗಳೇ ಬಿದ್ದು ಹೋಗಿವೆ, ಇರುವ | • ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು, ಅಂಗವಿಕಲತೆಯಿರುವವರು, ದುರ್ಬಲವರ್ಗದವರು, ಕೃಷಿಕರು, ಕೂಲಿಕಾರ್ಮಿಕರು. | • ಶಾಲೆಯ ಕಟ್ಟಡಗಳ ದುರಸ್ತಿ ಮತ್ತು ನಿರ್ಮಾಣ ಅತ್ಯಂತ ಶೀಘ್ರವಾಗಿ ಆಗಬೇಕು ಇಲ್ಲವಾದಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು | • ರಾಷ್ಟ್ರ ವಿಕೋಪ ನಿರ್ವಹಣಾ ಕಾಯ್ದೆ<br>• ರಾಜ್ಯ ವಿಕೋಪ ನಿರ್ವಹಣಾ ಯೋಜನೆ<br>• ಜಿಲ್ಲಾ ವಿಕೋಪ |

| | | | | |
|---|---|---|---|---|
| | ಕೊಠಡಿಗಳಲ್ಲೂ ಬಿರುಕುಗಳು ಕಣ್ಣಿಗೆ ಕಾಣುತ್ತಿವೆ.<br>• ಶಾಲೆಯ ಕೊಠಡಿಯ ಅಭಾವದಿಂದಾಗಿ ಪಾಶ್ಚಾಪುರದಲ್ಲಿ ವೇಳಾ ಪಟ್ಟಿಯನ್ನು ಅರ್ಧಕ್ಕೆ ನಿಲ್ಲಿಸಿ, ಎರಡು ತಂಡಗಳಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದಾರೆ. ಪಾಶ್ಚಾಪುರದಲ್ಲಿ 2 ಮತ್ತು 3ನೇ ತರಗತಿಯ ಮಕ್ಕಳನ್ನು ಒಂದೇ ಕೋಣೆಯಲ್ಲಿ ಕೂರಿಸಿ ಪಾಠ ಹೇಳುವ ಪ್ರಯತ್ನ ನಡೆಸುತ್ತಿದ್ದಾರೆ. ಈ ಎರಡೂ ಕಡೆ ಮಕ್ಕಳು ಕಲಿಕೆಗೆ ಒದಗಿರುವ ಕಷ್ಟದ ಬಗ್ಗೆ ಹಾಗೂ ಪೂರ್ಣ ಕಲಿಕೆ ಆಗದಿರುವ ಬಗ್ಗೆ ಅತ್ಯಂತ ಗಂಭೀರವಾಗಿ ಸಮಸ್ಯೆ ಎತ್ತಿದ್ದಾರೆ.<br>• ಆರೋಗ್ಯ ಉಪಕೇಂದ್ರಗಳಿಲ್ಲ. (ಮಾಸ್ಕೇನಹಟ್ಟಿ) ಮತ್ತು ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿಗಳ ವ್ಯವಸ್ಥೆಯಿಲ್ಲ, ದಾದಿಯು ನಿಯತಕಾಲಿಕವಾಗಿ ಬರುತ್ತಿಲ್ಲ. ನೆರೆ ಬಂದ ಸಂದರ್ಭದಲ್ಲಿ ಈ ಸಮಸ್ಯೆ ಜನರಿಗೆ ತೀವ್ರವಾದ ತೊಂದರೆಯನ್ನುಂಟು ಮಾಡಿದೆ.<br>• ಮಾಸ್ಕೇನಹಟ್ಟಿಯಲ್ಲಿ ನ್ಯಾಯಬೆಲೆ ಅಂಗಡಿ ಇಲ್ಲ.<br>• ಈಗ ಶಾಲೆಗಳಿಗೆ ಸರ್ಕಾರದಿಂದ ರೂ 25000/ ಅನುದಾನವನ್ನು ನೀಡುತ್ತಿದ್ದು ಈ ಹಣದಲ್ಲಿ ಶಾಲಾನಿರ್ವಹಣೆ, ದುರಸ್ತಿ, ಕ್ರೀಡೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರವಾಸಗಳು, ವಿಶೇಷ ದಿನಾಚರಣೆಗಳನ್ನು | | ಸಾಧ್ಯವಾಗುವುದಿಲ್ಲ.<br>• ನ್ಯಾಯಬೆಲೆ ಅಂಗಡಿಗಳ ಆರಂಭವಾಗಬೇಕು.<br>• ಆರೋಗ್ಯ ಕೇಂದ್ರಗಳ ಸ್ಥಾಪನೆ ಮತ್ತು ಅಗತ್ಯ ವ್ಯವಸ್ಥೆಗಳನ್ನು ಮಾಡುವುದು.<br>• ಈಗ ಶಾಲೆಗಳಿಗೆ ಸರ್ಕಾರದಿಂದ ನೀಡುವ ನಿರ್ವಹಣಾ ವೆಚ್ಚ ರೂ. 25000 ಸಾಲುತ್ತಿಲ್ಲ.<br>• ಸ್ಥಳೀಯ ಸರ್ಕಾರ ಕಡಾಖಂಡಿತವಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲೇಬೇಕು ಅವರಿಗೆ ಪೂರಕವಾಗಿ ಕೆಲಸ ಮಾಡಬೇಕಾದ ಅಧಿಕಾರಿಗಳು ಅವರೊಂದಿಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬೇಕು.<br>• ಸ್ಥಳೀಯ ಸರ್ಕಾರದಿಂದ ವಿಕೋಪಕ್ಕೆ ಮುಂಚಿತವಾಗಿ ಮುನ್ಸೂಚನೆಯನ್ನು ಅಗತ್ಯವಾಗಿ ನೀಡಬೇಕು ಜೊತೆಗೆ ಕಾಳಜಿ ಕೇಂದ್ರಗಳು ಹಾಗೂ ಗಂಜಿಕೇಂದ್ರಗಳನ್ನು ಮುಂಚಿತವಾಗಿಯೇ ನಿರ್ಮಿಸಿ ಅದರ ಬಗ್ಗೆ | ನಿರ್ವಹಣಾ ಕಾರ್ಯತಂತ್ರ 2016<br>• ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ<br>• ಮಕ್ಕಳ ಹಕ್ಕುಗಳ ಒಡಂಬಡಿಕೆ<br>• ರಾಷ್ಟ್ರ ಮಕ್ಕಳ ನೀತಿ<br>• ರಾಜ್ಯ ಮಕ್ಕಳ ರಕ್ಷಣಾ ನೀತಿ<br>• ಆಹಾರ ಭದ್ರತಾ ಕಾಯ್ದೆ<br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993<br>• ಕೆ.ಡಿ.ಪಿ. ಸಭೆಯ ಆದೇಶ<br>• ಕರ್ನಾಟಕ ಶಾಲೆಗಳ ಮಕ್ಕಳ ರಕ್ಷಣಾ ಮಾರ್ಗದರ್ಶಿ |

| | | | | |
|---|---|---|---|---|
| | ನಡೆಸಬೇಕು. ಹೀಗಿರುವಾಗ ಈ ಹಣದಲ್ಲಿ ಶಾಲಾ ದುರಸ್ತಿ ಕಾರ್ಯವನ್ನು ಮಾಡುವುದು ಕಷ್ಟವಾಗುತ್ತದೆ.<br>• ನಾವು ಕಂಡಂತಹ ತಾಲೂಕುಗಳಲ್ಲಿ ಜನರಿಗೆ ಗ್ರಾಮ ಪಂಚಾಯತ್‌ನ ಸ್ಪಂದನೆ ಕನಿಷ್ಟ ಮಟ್ಟದ್ದಾಗಿದೆ ಎಂಬ ಅಭಿಪ್ರಾಯ ಮೂಡಿತು. ಉದಾಹರಣೆಗೆ ಮಣಗುತ್ತಿಯಲ್ಲಿ ಸಂಪೂರ್ಣವಾಗಿ ಮನೆ ಕಳೆದುಕೊಂಡ ಇಬ್ಬರು ವೃದ್ಧರಿಗೆ ಯಾವುದೇ ಬೆಂಬಲ ಸಿಕ್ಕಿಲ್ಲ, ಅವರ ನೆರೆ ಮನೆಯಲ್ಲಿಯೇ ಪಂಚಾಯತ್ ಸದಸ್ಯರಿದ್ದಾಗಿಯೂ ಕೂಡ.<br>• ನೆರೆ ಬರುವ ಸಂದರ್ಭದಲ್ಲಿ ಮಣಗುತ್ತಿಯಲ್ಲಿ ಯಾವುದೇ ಪೂರ್ವ ಸೂಚನೆಯನ್ನು ನೀಡಿರಲಿಲ್ಲ. ಇದರಿಂದಾಗಿ ಜನರಿಗೆ ಆತಂಕ ಹೆಚ್ಚಾಗಿ ಯಾವುದೇ ಪೂರ್ವ ತಯಾರಿಗಳಿಲ್ಲದೇ ಮನೆಮಠ ಬಿಡುವ ಪರಿಸ್ಥಿತಿ ಉಂಟಾಗಿದೆ.<br>• ಪಾಶ್ಚಾಪುರದ ಒಂದು ಕುಟುಂಬದಲ್ಲಿ ನೆರೆ ಪರಿಹಾರಕ್ಕಾಗಿ ಪರವೂರಿನಿಂದ ಬಂದ ಯುವಕನೊಬ್ಬ ನೀರಿನ ಹೊಂಡದಲ್ಲಿ ಆಕಸ್ಮಿಕವಾಗಿ ಮುಳುಗಿ ಮರಣ ಹೊಂದಿದ್ದಾರೆ ಆದರೆ ಅವರ ಕುಟುಂಬಕ್ಕೆ ಕೇವಲ 25000 ರೂಗಳ ಪರಿಹಾರ ಸಿಕ್ಕಿದೆ.<br>• ಖಾನಾಪುರ ತಾಲೂಕಿನ ಹಂದೂರ ಗ್ರಾಮದಲ್ಲಿ ಮನೆಗೆ ಪ್ಲಾಸ್ಟಿಕ್ ಹೊದೆಸಲು ಹೋದ ವ್ಯಕ್ತಿಯೊಬ್ಬರು ಬಿದ್ದು ಕೈ ಮುರಿದುಕೊಂಡು ಕೈಯನ್ನೇ ಕತ್ತರಿಸಿ | | ಜನರಿಗೆ ಮಾಹಿತಿಯನ್ನು ನೀಡಬೇಕು.<br>• ಪಾಶ್ಚಾಪುರದಲ್ಲಿ ತನ್ನಮಗನನ್ನು ಕಳೆದುಕೊಂಡ ಈ ಕುಟುಂಬಕ್ಕೆ ಸಂಪೂರ್ಣ ಪರಿಹಾರಧನವನ್ನು ನೀಡಬೇಕು.<br>• ಎಲ್ಲಾ ಪಂಚಾಯತ್‌ಗಳಲ್ಲಿ ಕೆ.ಡಿ.ಪಿ. ಸಭೆಗಳನ್ನು ನಡೆಸಬೇಕು. ಮಾರ್ಗದರ್ಶಿಯಲ್ಲಿ ಸೂಚಿಸಿರುವಂತೆ ಎಲ್ಲಾ ಪದಾಧಿಕಾರಿಗಳನ್ನು ಕರೆಯಬೇಕು.<br>• ಮಳೆಯಿಂದಾಗಿ ಕೈ ಕಳೆದುಕೊಂಡ ವ್ಯಕ್ತಿಗೆ | |

| | | | | |
|---|---|---|---|---|
| | ತೆಗೆಯಲಾಗಿದೆ. ಅವರಿಗೆ ಯಾವುದೇ ಪರಿಹಾರ ಬಂದಿಲ್ಲ.<br>• ಆದೇಶದನ್ವಯ ಕಡ್ಡಾಯವಾಗಿ ನಡೆಯಬೇಕಾಗಿರುವ ಗ್ರಾಮ ಪಂಚಾಯತ್ ಮಟ್ಟದ ಕೆ.ಡಿ.ಪಿ. ಸಭೆಗಳು ನಡೆಯುತ್ತಿಲ್ಲ (ಉದಾಹರಣೆಗೆ ಪಾಶ್ಚಾಪುರ) | | ಪರಿಹಾರ ಧನ ಮಂಜೂರು ಮಾಡಬೇಕು. | |
| 4. ವ್ಯವಸ್ಥೆಗಳು | • ನೆರೆಯಿಂದ ರಸ್ತೆಯು ಹಾಳಾಗಿದೆ ಮತ್ತು ಬಸ್ ಸಂಚಾರದ ವ್ಯವಸ್ಥೆಯಿಲ್ಲ. ಹಾಗಾಗಿ ಮಾಸ್ಕೇನಹಟ್ಟಿಯಲ್ಲಿ ನಾಲ್ಕು ಹೆಣ್ಣು ಮಕ್ಕಳು ಹಾಗೂ ನಾಲ್ಕು ಗಂಡು ಮಕ್ಕಳು ಪ್ರೌಢ ಶಾಲಾ ಶಿಕ್ಷಣವನ್ನು ನಿಲ್ಲಿಸಿದ್ದಾರೆ. ಉಳಿದ 20 ಮಕ್ಕಳು ಶಾಲೆ ಮುಗಿಸಿ ಮನೆಗೆ ಬರುವಾಗ ರಾತ್ರಿ 9 ಗಂಟೆಯಾಗುತ್ತಿದೆ ಹಾಗಾಗಿ ಅವರೂ ಕೂಡ ಶಾಲಾ ಶಿಕ್ಷಣ ನಿಲ್ಲಿಸುವ ಸಾಧ್ಯತೆ ಹೆಚ್ಚಿದೆ.<br>• ತೀವ್ರವಾದ ಮಳೆಬಂದರೂ ಕೂಡ ಅದನ್ನು ಸಂಗ್ರಹಿಸಿಡುವ ಪೂರವಾದ ವ್ಯವಸ್ಥೆಗಳಿಲ್ಲದೇ ಇರುವುದರಿಂದ ನೀರಿನ ಅಭಾವ ಕಾಡುತ್ತಿದೆ. ಮುಂದಿನ ಕೆಲವು ತಿಂಗಳುಗಳಲ್ಲಿ ಬರವನ್ನು ಅನುಭವಿಸುವ ಸಾಧ್ಯತೆಯಿದೆ.<br>• ಮಾಸ್ಕೇನಹಟ್ಟಿಯ ಗೋಮಾರಿಹಳ್ಳಕ್ಕೆ ಸೇತುವೆಯಿಲ್ಲದ ಕಾರಣ ಅನೇಕ ಕೃಷಿಕರು 15 ದಿನಗಳ ಕಾಲ ನೆರೆಯಲ್ಲಿ | • ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು, ಅಂಗವಿಕಲತೆಯಿರುವವರು, ದುರ್ಬಲವರ್ಗದವರು, ಕೃಷಿಕರು, ಕೂಲಿಕಾರ್ಮಿಕರು, ಸಮುದಾಯದ ಎಲ್ಲರಿಗೂ. | • ರಸ್ತೆಗಳ ನಿರ್ಮಾಣ ಮತ್ತು ಬಸ್ ಸಂಚಾರದ ವ್ಯವಸ್ಥೆಯನ್ನು ಮಾಡುವುದು.<br>• ಮಾಸ್ಕೇನಹಟ್ಟಿಯ | • ರಾಷ್ಟ್ರ ವಿಕೋಪ ನಿರ್ವಹಣಾ ಕಾಯ್ದೆ<br>• ರಾಜ್ಯ ವಿಕೋಪ ನಿರ್ವಹಣಾ ಯೋಜನೆ<br>• ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರ 2016<br>• ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ<br>• ಮಕ್ಕಳ ಹಕ್ಕುಗಳ ಒಡಂಬಡಿಕೆ<br>• ರಾಷ್ಟ್ರ ಮಕ್ಕಳ ನೀತಿ<br>• ರಾಜ್ಯ ಮಕ್ಕಳ ರಕ್ಷಣಾ ನೀತಿ<br>• ಆಹಾರ ಭದ್ರತಾ ಕಾಯ್ದೆ<br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993<br>• ಕರ್ನಾಟಕ ಶಾಲೆಗಳ |

| | | | | |
|---|---|---|---|---|
| | ಸಿಲುಕಿಕೊಂಡಿದ್ದರು. ಈ ದಾರಿಯಲ್ಲಿಯೇ ಜನರು ಅಗತ್ಯವಿರುವ ಹಾಲು, ದಿನಸಿ ಸಾಮಾನು ಮುಂತಾದ ಪದಾರ್ಥಗಳನ್ನು ಕೊಳ್ಳಲು ಪಕ್ಕದ ಹಳ್ಳಿಯಾದ ಸೋನನಹಟ್ಟಿಗೆ ಹೋಗಬೇಕು, ಮತ್ತು ಈ ದಾರಿಯನ್ನು ಬಳಸಿ ಶಿಕ್ಷಕರು ಶಾಲೆಗೆ ಬರುತ್ತಾರೆ. ಹಾಗಾಗಿ ನೆರೆಯಿಂದ ಇವರೆಲ್ಲರೂ ತೀವ್ರವಾದ ಸಮಸ್ಯೆಯನ್ನು ಅನುಭವಿಸಿದ್ದಾರೆ. ಅಲ್ಲಿ ಮತ್ತೊಮ್ಮೆ ಮಳೆ ಬಂದಲ್ಲಿ ಈ ಸಮಸ್ಯೆ ಪುನರಾವರ್ತಿಸುವುದರಲ್ಲಿ ಯಾವುದೇ ಸಂಶಯವಿಲ್ಲ. | | ಗೋಮಾರಿಹಳ್ಳಕ್ಕೆ ಸೇತುವೆಯ ನಿರ್ಮಾಣ ಶೀಘ್ರವಾಗಿ ಆಗಬೇಕು. | ಮಕ್ಕಳ ರಕ್ಷಣಾ ಮಾರ್ಗದರ್ಶಿ |
| 5. ಸಾಮಾನ್ಯ ಸಮಸ್ಯೆಗಳು | ***ಮಕ್ಕಳಿಗೆ ಸಂಬಂಧಿಸಿದ್ದು:***<br>• ಮಕ್ಕಳ ಗ್ರಾಮ ಸಭೆ ಆಗದೇ ಇರುವುದು, ಗ್ರಾಮ ಸಭೆಗಳು ಆದ ಕಡೆಗಳಲ್ಲಿ ದುಡಿಯುವ ಮಕ್ಕಳು, ಹದಿಹರೆಯದವರು ಅವರ ಅನುಕೂಲಕ್ಕೆ ತಕ್ಕಂತೆ ಸಭೆಗಳು ನಡೆಯದೇ ಇರುವುದರಿಂದ ಭಾಗವಹಿಸಲು ಸಾಧ್ಯವಾಗದಿರುವುದು.<br>• ಗ್ರಾಮ ಪಂಚಾಯತ್‌ನಿಂದ ದೂರವಿರುವ ಮಕ್ಕಳಿಗೆ ಇದರಲ್ಲಿ ಭಾಗವಹಿಸಲು ಸಾಧ್ಯವಾಗದಿರುವುದು.<br>• 14ವರ್ಷ ಮೇಲ್ಪಟ್ಟ ಮಕ್ಕಳಿಗೆ ಯಾವುದೇ ವೃತ್ತಿ ತರಬೇತಿ ಹಾಗೂ ಸುಭದ್ರ ವೃತ್ತಿಯ ಅವಕಾಶಗಳಿಲ್ಲ ಹಾಗಾಗಿ ವಿಟ್ಟ ಖಾನಾಪೂರ ಮತ್ತು ಕೊಲ್ಲಾಪುರಕ್ಕೆ ವಲಸೆ ಹೋಗುತ್ತಿದ್ದಾರೆ. | • ಗ್ರಾಮದ ಎಲ್ಲಾ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ 14 ವರ್ಷ ಮೇಲ್ಪಟ್ಟ ಮಕ್ಕಳಿಗೆ ದುಡಿಯುವ ಮಕ್ಕಳಿಗೆ, ಹದಿಹರೆಯದ ಮಕ್ಕಳಿಗೆ, ಪ್ರೌಢ ಶಾಲಾ ಮಕ್ಕಳಿಗೆ, ಕೃಷಿ ಕೂಲಿ ಕಾರ್ಮಿಕರ ಮಕ್ಕಳಿಗೆ. | ***ಮಕ್ಕಳಿಗೆ ಸಂಬಂಧಿಸಿದ್ದು:***<br>• ಮಕ್ಕಳ ಗ್ರಾಮ ಸಭೆ 2007ರ ಮಾರ್ಗದರ್ಶಿಯನುಸಾರ ನಡೆಯಲೇಬೇಕು.<br>• ಈ ಮಕ್ಕಳ ಗ್ರಾಮ ಸಭೆಯಲ್ಲಿ ಎಲ್ಲಾ ಮಕ್ಕಳು, ವಿಶೇಷವಾಗಿ ದುಡಿಯುವ ಮಕ್ಕಳು, ಅಂಗವಿಕಲ ಮಕ್ಕಳು, ಬಾಲ್ಯ ವಿವಾಹ ಅನುಭವಿಸಿರುವ ಮಕ್ಕಳು, ಇವರೆಲ್ಲರ ಭಾಗವಹಿಸುವಿಕೆಯನ್ನು ಖಚಿತಗೊಳಿಸಬೇಕು. ಅವರಿಗೆ ಸೂಕ್ತವಾದ ಸ್ಥಳ ಹಾಗೂ ಸಮಯ ನಿಗದಿಯಾಗಬೇಕು. | • ಮಕ್ಕಳ ಗ್ರಾಮಸಭೆ ಮಾರ್ಗಸೂಚಿ 2007<br>• ಬಾಲ ಕಾರ್ಮಿಕ ಹಾಗೂ ಹದಿಹರೆಯದ ಕಾರ್ಮಿಕರ ಕಾಯ್ದೆ<br>• ಬಾಲ್ಯವಿವಾಹಕ್ಕೆ ಸಂಬಂಧಿಸಿದ ನ್ಯಾ. ಶಿವರಾಜ ಪಾಟೀಲ್ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಮಕ್ಕಳಿಗೆ ಒದಗಿಸಲೇಬೇಕು<br>• ರಾಷ್ಟ್ರ ವಿಕೋಪ ನಿರ್ವಹಣಾ ಕಾಯ್ದೆ<br>• ರಾಜ್ಯ ವಿಕೋಪ ನಿರ್ವಹಣಾ ಯೋಜನೆ<br>• ಜಿಲ್ಲಾ ವಿಕೋಪ ನಿರ್ವಹಣಾ ಕಾರ್ಯತಂತ್ರ |

| | | | | |
|---|---|---|---|---|
| | • ಪ್ರೌಢ ಶಾಲೆಯಲ್ಲಿ ನೀಡುವ ಮಧ್ಯಾಹ್ನದ ಊಟದ ಗುಣಮಟ್ಟ ತುಂಬಾ ಕೆಟ್ಟದಾಗಿದೆ ಹಾಗೂ ಊದ ಜೊತೆಗೆ ಮೊಟೆಯನ್ನು ನೀಡುವುದಿಲ್ಲ.<br>• ಶಾಲೆಗಳಲ್ಲಿ ಶೌಚಾಲಯಗಳು ಉಪಯೋಗಕ್ಕೆ ಬರುತ್ತಿಲ್ಲ. ನೀರಿನ ಅಭಾವವೂ ಇದೆ.<br>• ಬೆಳಗಾವಿ ಜಿಲ್ಲೆಯಲ್ಲಿ ಬಾಲ್ಯವಿವಾಹದ ಅನೇಕ ಪ್ರಕರಣಗಳನ್ನು ಸ್ಥಳೀಯ ಸರ್ಕಾರಗಳು ನಮ್ಮ ಗಮನಕ್ಕೆ ತಂದಿದ್ದಾರೆ. | | • 14 ವರ್ಷ ಮೇಲ್ಪಟ್ಟ ಮಕ್ಕಳು ಕಾನೂನಿನ್ವಯ ಸುಭದ್ರ ಕೆಲಸಗಳಲ್ಲಿ ತೊಡಗಿಕೊಳ್ಳಬಹುದು. ಅವರಿಗೆ ಅಗತ್ಯವಿರುವ ವೃತ್ತಿತರಬೇತಿಗಳು, ಕೆಲಸದ ಅವಕಾಶಗಳು, ಕೆಲಸದಲ್ಲಿ ಸುರಕ್ಷತೆ ಹಾಗೂ ಕಾರ್ಮಿಕರ ಹಕ್ಕುಗಳನ್ನು ಒದಗಿಸಬೇಕು.<br>• ಈಗ ಸರ್ಕಾರದ ವತಿಯಿಂದ 18 ವರ್ಷ ಮೇಲ್ಪಟ್ಟವರಿಗೆ ನೀಡುತ್ತಿರುವ ವೃತ್ತಿ ತರಬೇತಿ ಹಾಗೂ ವಿದ್ಯಾರ್ಥಿ ವೇತನಗಳನ್ನು ವಿಮರ್ಶಿಸಿ ಅವುಗಳಲ್ಲಿ ಯಾವುದು ಸೂಕ್ತವೋ ಅದನ್ನು 14 ವರ್ಷ ಮೇಲ್ಪಟ್ಟವರಿಗೂ ಕೂಡ ದೊರೆಯುವಂತೆ ಮಾಡಬೇಕು.<br>• ಪ್ರೌಢ ಶಾಲೆಯಲ್ಲಿ ನೀಡುತ್ತಿರುವ ಊಟದ ವಿಮರ್ಶೆಯಾಗಿ ಗುಣಮಟ್ಟದ ಊಟವನ್ನು ಒದಗಿಸಬೇಕು.<br>• ಶೌಚಾಲಯಗಳ ನಿರ್ಮಾಣವಾಗಬೇಕು ಹಾಗೂ ನೀರು | 2016<br>• ನರೇಗಾ ಕಾಯ್ದೆ ಮತ್ತು ಮಾರ್ಗದರ್ಶಿ<br>• ಮಕ್ಕಳ ಹಕ್ಕುಗಳ ಒಡಂಬಡಿಕೆ<br>• ರಾಷ್ಟ್ರ ಮಕ್ಕಳ ನೀತಿ<br>• ರಾಜ್ಯ ಮಕ್ಕಳ ರಕ್ಷಣಾ ನೀತಿ<br>• ಆಹಾರ ಭದ್ರತಾ ಕಾಯ್ದೆ<br>• ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993<br>• ಕರ್ನಾಟಕ ಶಾಲೆಗಳ ಮಕ್ಕಳ ರಕ್ಷಣಾ ಮಾರ್ಗದರ್ಶಿ. |

| | | | | |
|---|---|---|---|---|
| | **ಕಾರ್ಮಿಕರಿಗೆ** ***ಸಂಬಂಧಿಸಿದ್ದು:***<br>• ನರೇಗ ಕಾರ್ಯಕ್ರಮದಲ್ಲಿ ದುಡಿಯುವ ಕೂಲಿ ಕಾರ್ಮಿಕರಿಗೆ ಕೂಲಿ ಸರಿಯಾಗಿ ಸಿಗದೇ ಇರುವುದರಿಂದ ಅವರು ಕೆಲಸ ಅರಸಿ ವಲಸೆ ಹೋಗುತ್ತಿದ್ದಾರೆ.<br>• ನೆರೆ ಪ್ರದೇಶದಲ್ಲಿ ನರೇಗಾ ಕಾರ್ಯಕ್ರಮವನ್ನು ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವ ಬಗ್ಗೆ ಕಾರ್ಮಿಕರಿಗೆ ಸ್ಪಷ್ಟತೆಯಿಲ್ಲ.<br>• ನರೇಗಾ ಕಾರ್ಯಕ್ರಮದಲ್ಲಿ ಈಗ | | ಸರಬರಾಜನ್ನು ಖಾತ್ರಿಗೊಳಿಸಬೇಕು.<br>• ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಆಗಿರುವ ಕಾನೂನಿನ ತಿದ್ದುಪಡಿಯನ್ನು ವ್ಯಾಪಕವಾಗಿ ಜನರಿಗೆ ತಲುಪಿಸಬೇಕು.<br>• ಕೇವಲ ಬಾಲ್ಯವಿವಾಹಗಳನ್ನು ಅವು ನಡೆಯುವ ಸಂದರ್ಭದಲ್ಲಿ ನಿಲ್ಲಿಸುವುದಲ್ಲ ಮಕ್ಕಳಿಗೆ ಪರ್ಯಾಯ ವ್ಯವಸ್ಥೆಗಳನ್ನು ನ್ಯಾ. ಶಿವರಾಜ ಪಾಟೀಲ್ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಮಕ್ಕಳಿಗೆ ಒದಗಿಸಲೇಬೇಕು.<br>***ಕಾರ್ಮಿಕರಿಗೆ ಸಂಬಂಧಿಸಿದ್ದು:***<br>• ನರೇಗಾ ಕಾರ್ಯಕ್ರಮದಲ್ಲಿ ಕೆಲಸಕ್ಕೆ ಸರಿಯಾದ ಕೂಲಿ ಸೂಕ್ತ ಸಮಯದಲ್ಲಿ ಸಿಗಬೇಕು.<br>• ಕುಟುಂಬಕ್ಕೆ ನೀಡುವ 100 ದಿನಗಳ ಬದಲಿಗೆ ಪ್ರತಿ ವ್ಯಕ್ತಿಗೆ 100ದಿನಗಳ ಕೆಲಸವನ್ನು ನೀಡಬೇಕು. | |

| | | | | |
|---|---|---|---|---|
| | ಕುಟುಂಬಕ್ಕೆ ಇರುವ 100 ದಿನಗಳ ಕೆಲಸ ಸಾಲುತ್ತಿಲ್ಲ. | | | |

ತಮ್ಮ ಜಿಲ್ಲೆಯಲ್ಲಿ ನೆರೆಹಾವಳಿಯಿಂದಾದ ಸಮಸ್ಯೆಗಳ ನೈಜ ಚಿತ್ರಣವನ್ನು ಈ ಮೂಲಕ ತಮ್ಮ ಮುಂದೆ ಇಟ್ಟಿರುತ್ತೇವೆ. ಬೆಳಗಾವಿ ಜಿಲ್ಲೆಯ ಮಕ್ಕಳ ಮಹಿಳೆಯರ, ಸಮುದಾಯದವರ ಮೇಲೆ ಕಾಳಜಿ ಹೊಂದಿರುವ ತಾವು ತ್ವರಿತಗತಿಯಲ್ಲಿ ಈ ಮೇಲೆ ಹೇಳಿದ ಎಲ್ಲಾ ಸಮಸ್ಯೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಯಗಳ/ ಸ್ಥಳೀಯಾಡಳಿತಗಳಿಂದ ಇದರ ಪ್ರಗತಿಯ ಬಗ್ಗೆ ಪರಿಶೀಲನಾ ವರದಿಯನ್ನು ತರಿಸಿ ನೆರೆ ಸಂತ್ರಸ್ತರಿಗೆ ಸೂಕ್ತವ್ಯವಸ್ಥೆಯನ್ನು ತಾವು ಮಾಡುವಿರಾಗಿ ನಂಬಿರುತ್ತೇವೆ.

ಇಂತಿ ತಮ್ಮ ವಿಶ್ವಾಸಿ,


- ಶಾರದಾ ಗೋಪಾಲ್: +91 – 9902840033
  ಜಾಗೃತ ಮಹಿಳಾ ಒಕ್ಕೂಟ
- ಕವಿತಾ ರತ್ನ: +91 – 94489 90480
  ನಿರ್ದೇಶಕಿ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
- ಶಿವಾಜಿ ಕಾಗಣಿಕರ್
- ವಿಶ್ವೇಶ್ವರಯ್ಯ ಹಿರೇಮಠ್: +91 – 9341062808